# ಅತಿಥಿ

ಈ ಸಲದ ಬಿಹು ಹಬ್ಬಕ್ಕೆ, ನನ್ನ ಮನೆಗೆ ಬರುವುದಕ್ಕೆ
ನಿಮಗೆ ನನ್ನ ವಿಳಾಸ ಕೊಡುವುದಿಲ್ಲ,
ನನ್ನನ್ನು ಹುಡುಕಿಕೊಂಡು 'ಅಲುಪೊರ' ಹಳ್ಳಿಗೆ ಬನ್ನಿ.

ಮಡಕೆ ಹೊತ್ತು ಸಾಗುತ್ತಿರುವ ಯಾರನ್ನಾದರೂ ಕೇಳಿ ನನ್ನ ಕುರಿತು,
ಹೊಳೆದಂಡೆಯ ಮೇಲೆ ಆಡುತ್ತಿರುವ
ಬೆತ್ತಲೆ ಮೈಯ ಹುಡುಗರನು ಕೇಳಿ ನನ್ನ ವಿಳಾಸದ ಬಗ್ಗೆ,
ಹರೆಯದ ಆ ಹುಡುಗಿಯರು ಕಿಲಕಿಲನೆ ನಕ್ಕರೆ
ನಿಮಗೆ ತಿಳಿಯುತ್ತದೆ ಇದು ನನ್ನ ಹಳ್ಳಿಯೆಂದು.

ಅಥವಾ ನೀವು ಒಂದು ಕೆಲಸ ಮಾಡಬಹುದು,
ಗೇಲಾಬಿಲ್ ಹೊಳೆಯನು ದಾಟಿದ ಬಳಿಕ ಸಿಗುವ ಮೊದಲ ಮನೆಯಲ್ಲಿ
ನನ್ನ ದಿಕ್ಕುದೆಸೆ ಕುರಿತು ಕೇಳಿ,
ಆ ಮನೆಯ ಹೆಂಗಸು ಒಡಕು ದನಿಯಲ್ಲಿ ಉತ್ತರಿಸಿದಳೆಂದರೆ
ಹುಷಾರು! ಹಿಂತಿರುಗಿ ಬಂದುಬಿಡಿ!
ಯಾಕೆಂದರೆ ಅದು ಚರಾಯ್‌ಪುಂಗ್
ಅಥವಾ ಲಿಖೀಪಥರ್ ಆಗಿರಬಹುದು,
ಒಂದು ವೇಳೆ ಯಾರಾದರೂ ಗಂಡಸರು
ಮನೆಯ ಒಳಗಿಂದಲೇ ಉತ್ತರಿಸಿ ಬಾಗಿಲು ತೆರೆದರೆ
ನನ್ನ ಮನೆಯ ತಲುಪಿದ ಖುಷಿಯಲ್ಲಿ
ನೀವು ನಿಶ್ಚಿಂತರಾಗಿ, ಖುಷಿಯಿಂದ ಕುಣಿಯಿರಿ.

ಮೊದಲು ನಿಮಗೆ ಅವರು ಒಂದು ಬಟ್ಟಲು 'ಅಪಾಂಗ್' ಕೊಡುತ್ತಾರೆ
ಇದರೊಟ್ಟಿಗೆ, ಬಾಳೆಯೆಲೆಯ ಮೇಲೆ ಸುಟ್ಟ 'ಗೋರೈ ಮಚ್',
ಜೊತೆಗೆ ಬೇಯಿಸಿದ ಮರಗೆಣಸಿನ ತುಂಡು,
ನಂಜಿಕೊಳ್ಳಲು ಜೊತೆಗೊಂದಿಷ್ಟು ಹಸಿಮೆಣಸು, ಉಪ್ಪು ಕೊಡುತ್ತಾರೆ.
ಅತಿಥಿಗಳನ್ನು ಅವರು ಒಳಗೊಳ್ಳುವ ರೀತಿ ಇದು.

ಮೊದಲನೇ ಬಟ್ಟಲು ಮುಗಿದ ಮೇಲೆ
ಎರಡನೆಯ ಬಟ್ಟಲು ಕೊಡುತ್ತಾರೆ,
ಆ ಬಳಿಕ ಮೂರನೆಯದು
ಆಗೋ ಮತ್ತೆ ನಾಲ್ಕನೆಯದು.

ಬೇಡವೆನ್ನಬೇಡಿ, ಅವರಿಗೆ ನೋವಾಗಬಹುದು.
ಅಪಾಂಗ್ ಕುಡಿದು ಮತ್ತರಾಗಬೇಡಿ,

